126(2)

"SATYAVADI" Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಂಕಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 18] ಬುಧವಾರ 3—10—45 [ಬೆಲೆ ಪ್ರತಿ 3 ಪೈ

ಗಾಂಧೀಜೀ ಜಯುಂತ್ಯುತ್ಸವ

ನಾಳೆಯ ದಿವಸ ಸಂಜೆ ಮೈಸೂರು ಶ್ರೀ ತಿರುಮಂತ್ರೇಶ್ವರ ವಿದ್ಯಾರ್ಥಿನಿಲಯದ ಸಂಘದಲ್ಲಿ ಪೂಜ್ಯ ಗಾಂಧೀಜೀ ವರ್ಧಂತ್ಯುತ್ಸವವು ಶ್ರೀಮತಿ ಕೃಷ್ಣಾಬಾಯಿ ಪಣಜೀಕರರ ಅಧ್ಯಕ್ಷತೆಯಲ್ಲಿ ನಡೆಯುವುದು ಸರ್ವರ ಆಗಮನವನ್ನೂ ಕೋರಲಾಗಿದೆ.

ದಂಡಯಾತ್ರೆ ಫಲವು ಏನಾಗಬಹುದಿದ್ದಿತೋ?

ಹಿರೋಹಿಟೋ ಹೇಳುವರು

ಜಪಾನ್ ದಂಡಯಾತ್ರೆ ಏನಾದರು ನಡೆದಿದ್ದರೆ ಜಪಾನ್ ಸಂಪೂರ್ಣವಾಗಿ ಹಾಳಾಗುತ್ತಿತ್ತು ಮಿತ್ರರಾಷ್ಟ್ರಗಳು ಜಪಾನಿನ ವಿಚಾರಗಳಲ್ಲಿ ಕೈಗೊಂಡಿರುವ ಉತ್ಯವವು ಸಂಪೂರ್ಣತೃಪ್ತಿಯನ್ನುಂಟುಮಾಡಿರುವುದು—ಹಿರೋಹಿಟೋ ನೆ ಕಾರ್ಯದರ್ಶಿಯೊಡನೆ ನಡೆಸಿದ ಭೇಟಿಯಲ್ಲಿ ತಿಳಿಸಿದರು.

ಗಾಂಧೀಜೀ ವರ್ಧಂತಿ

ನಿನ್ನೆಯ ದಿವಸ ಮೈಸೂರಿನಲ್ಲಿರುವ ಬುಜನ ಯ್ಯನವರ ಹೈಸ್ಕೂಲ್‌ನಲ್ಲಿ ಗಾಂಧಿಜಯಂತಿ ವಿಶೇಷ ವಿಜೃಂಭಣೆಯಿಂದ ನಡೆಯಿತು ನೂಲುವ ಸ್ಪರ್ಧೆಯಲ್ಲಿ ಜಯಪಡೆದವರಿಗೆ ಖದ್ದರ್ ಪರಸ್ಪರ ಸಹಾಯ ಸಂಘದವರಿಂದ ಇಡಲ್ಪಟ್ಟಿದ್ದ ಬಹುಮಾನವನ್ನು ಹಂಚಲಾಯಿತು ಮಧ್ಯಾಹ್ನ ಹಿಂದೀ ಭಾಷೆಯಲ್ಲಿ ಭಾಷಣವನ್ನು ಮಾಡಿದರು ಕನ್ನಡದಲ್ಲಿ ಆ ಭಾಷಣದ ತರ್ಜುಮೆ ಅನವಶ್ಯಕವೆಂದು ಹೆಂಗಸೊಬ್ಬಳು ಹೇಳಿದಳು ಪಂಡೆ ಮಾತರಂ ಗೀತೆಯೊಡನೆ ಸಭೆ ನಿಂತಿತು

.....

ಪೂನಾ ರೈಲ್ವೆ ಪೋರ್ಟರುಗಳ ಮುಷ್ಕರ ಪ್ರಾರಂಭವಾಗಿದೆ

o o

ಭಾರತದ ವಿಷಯದಲ್ಲಿ ಸಹಾನುಭೂತಿಯುಳ್ಳವರೆಲ್ಲರೂ ಈ ದಿವಸ ಲಂಡನ್ನಲ್ಲಿ ಗಾಂಧೀ ಜಯಂತಿ ಸಂದರ್ಭದಲ್ಲಿ ಅನುಸಂಧಾನ ನಡೆಯುವರು.

o o

ಸೈಗಾನ್ನಲ್ಲಿ ಅಶಾಂತಿಯು ಹೆಚ್ಚು ಕಾಣಿಸಿರುವುದರಿಂದ ಬ್ರಿಟೀಷ್ ಸೇನೆಗಳು ಬಂದಿಳಿದಿವೆ.

ಹೆನ್ರಿ ಬಿಟ್ಟನಿಗೆ ಹಿಟ್ಲರ್ ಕಳುಹಿಸಿದ್ದನೇ!!

ಬ್ರಿಟನ್ನಿಗೆ ಹೆಸ್ಸನ್ನು ಹಿಟ್ಲರೇ ಕಳುಹಿಸಿದ್ದೆಂದೂ, ಅವನು ಚರ್ಚಿಲ್ ಸರಕಾರವನ್ನು ಯುದ್ಧದಿಂದ ವಾಪಸಾಗುವಂತೆ ಮಾಡಿ ಜರ್ಮನಿಯು ರಷ್ಯಾ ಮೇಲೆ ಮಾತ್ರ ಯುದ್ಧ ನಡೆಸಲು ಅನುಕೂಲಿಸಲು ಏರ್ಪಾಡು ಮಾಡಲು ಹೀಗೆ ಮಾಡಲಾಗಿದ್ದಿತೆಂದೂ ಕರ್ಮನ್ ಸರಕಾರಿ ಕಾಗದಪತ್ರಗಳು ತಿಳಿಸುತ್ತವೆ.

ನ್ಯೂರಾಸಿನ ಲಕ್ಷ್ಮೀಕಾಂತಂ ಖೂನಿ ಮೊಖದ್ದಮೆಯಲ್ಲಿ ತ್ಯಾಗರಾಜ ಭಾಗವತರ್ ಮುಂತಾದವರು ಮಾಡಿರುವ ಅಪೀಲು ಈ ದಿನಗಳು ತಾ || 8 ರಲ್ಲಿ ಹೈ ಕೋರ್ಟಿನ ಇಬ್ಬರು ಜಡ್ಜರ ಮುಂದೆ ವಿಚಾರಣೆಗೆ ಬರುವುದು.

ವಾಷಿಂಗ್ಟನ್ ಆ 1— ಫ್ರೆಂಚ್ ಇಂಡೋಚೈನಾದಲ್ಲಿ ಜಪಾನರು ತಮ್ಮ ಶರಣಾಗತಿಕ್ಕೆ ಮುಂಚೆ, ಅನ್ನಮೈಟರಿಗೆ ಶಸ್ತ್ರಾಸ್ತ್ರಗಳನ್ನು ಕೊಟ್ಟಿದ್ದರೆಂದೂ ಅದರಿಂದ ಫಿಲ್ಲಿಯು ಅಂದೋಳನಕ್ಕೆ ಕಾರಣನೆಂದೂ ಇಲ್ಲಿಯ ಫ್ರೆಂಚ್ ರಾಯಭಾರಿಯು ಅಭಿಪ್ರಾಯವಾಗಿದೆ.

ಕೈಮಗ್ಗದ ಒಟ್ಟಿಯ ಕ್ರಯ ನಿಗದಿಯು ಇನ್ನು ಮುಂದಿಲ್ಲವೆಂದು ಮದರಾಸು ಸರಕಾರದ ಆಜ್ಞೆ. ಮಿಲ್ ಬಟ್ಟೆಗಳು ಹೆಚ್ಚಾಗಿ ದೊರೆಯುವದರಿಂದ ಕೈ ಮಗ್ಗದ ಬಟ್ಟೆ ದರ ಹೆಚ್ಚಾಗಿ ಹಾಕಿದರೆ ವ್ಯಾಪಾರ ತಾನೇ ಆಗುವುದಿಲ್ಲವೆನ್ನುವುದೇ ಇದಕ್ಕೆ ಕಾರಣ.



ಜಪಾನ್ ರಾಜಧಾನಿ ವಿಮಾನದಿಂದ ಹೀಗೆ ಕಾಣುತ್ತೆ

೫ನೇ ಭಾ. ದಳದ ಪರಾಕ್ರಮದ ಚಿತ್ರ ಪ್ರದರ್ಶನ

ಲಂಡನ್ ಸೆ 28— ಜಪಾನಿಗಳ ಶರಣಾಗತಿಗೆ ನೆಂಪಾದ ಭಾರತ ಸೇನೆಯ ಸಾಹಸವನ್ನು ಇಂಗ್ಲೆಂಡಿನ ನೂರಾರು ಸಿನಿಮಾ ಮಂದಿರಗಳಲ್ಲಿ ತೋರಿಸುತ್ತಿದ್ದಾರೆ. ಸಿಂಗಪುರವು ಮಿತ್ರರ ಸಶಬವಾದ ಚಿತ್ರ ವಿಶದವಾಗಿ ಸ್ಪಸಂಪೂರ್ಣವಾಗಿದೆ.

ಈ ವಿಜಯಕ್ಕೆ 5 ನೇ ಭಾ. ದಳವೇ ಮುಖ್ಯ ಕಾರಣ. ಇವು ಮೊದಲು ಮಲಯಾದಲ್ಲಿ ಕಾಲಾಳಿದ್ದು ಶರೆಣಾಗತಿ ಪತ್ರಿಕೆಗೆ ರುಜು ಹಾಕುವಾಗ ಬ್ರಿಗೇಡಿಯರ್ ಕೆ ಎಸ್. ತಿಮ್ಮಯ್ಯನವರು ಲಾಡ್ ಲೂಯಿ ಮೌಂಟ್‌ಬ್ಯಾಟನ್‌ರ ಬಲಗಡೆ ನಿಂತಿದ್ದಾರೆ. 5 ನೇ ಭಾ. ದಳವು ಲಾರಿಗಳಲ್ಲಿ ಕುಳಿತು ಹೋಗುತ್ತಿರುವಾಗ ಬೀದಿಗಳಲ್ಲಿ ಜನ ಗುಂಪುಗುಂಪಾಗಿ ನಿಂತು ಜಯಘೋಷ ಮಾಡುವುದು ಮತ್ತು ಮುಕ್ತರಾದ ಯುದ್ಧ ಖೈದಿಗಳು ಭಾ. ಸೈನಿಕರಿಂದ ಆಹಾರ ಸಿಗರೇಟುಗಳನ್ನು ತೆಗೆದುಕೊಳ್ಳುತ್ತಿರುವುದು ಮುಂತಾದ ದೃಶ್ಯಗಳು ಚಿತ್ರವಾಗಿವೆ. [ಐ. ಪಿ.]

ಕಾಂಗ್ರೆಸ್ ಅಧ್ಯಕ್ಷತೆ

ಮುಂದಿನ ಕಾಂಗ್ರೆಸ್ ಅಧ್ಯಕ್ಷತೆಗೆ ಸರದಾರ ಪಟೇಲರ ಹೆಸರನ್ನು ಮಹಾತ್ಮರು ಸೂಚಿಸಿದ್ದರೂ ಅವರ ಪ್ರಕೃತಿ ಅಷ್ಟೊಂದು ನೆಟ್ಟಗಿಲ್ಲ ವಾದದಿಂದ ಮುಂದಿನ ಕಾಂಗ್ರೆಸ್ ಅಧ್ಯಕ್ಷತೆಗೆ ಶ್ರೀ ಶರತ್‌ಚಂದ್ರ ಬೋಸರನ್ನು ಆರಿಸುವ ಸಂಭವವಿದೆಯೆಂದು ಹೇಳಲಾಗಿದೆ.

From 3—10—45

AT Opera—

ZAMIN

ದುರ್ಗಾ ಖೋಟೆ, ಕುರ್ಶಿದ್, ನಾಜಿರ್ ಡೇವಿಡ್ ಪಾತ್ರವಹಿಸಿರುವ

ಜಮೀನ್

ಮುಂದಿನವಿಸೋದ —

ಧಿಂಜರ್, ಟಿ ಆರ್, ರಾಜಕುಮಾರಿ

ಕೆ. ಎಲ್. ವಿ. ನಮತ,

ಕೃಷ್ಣ, ವಥ ರಂ ಪಾತ್ರವಹಿಸಿರುವ

ಶಾಲಿವಾಹನ

(ತಮಿಳು)

ಬಾಪುವಿನ ಹುಟ್ಟುದಿನ

.....

(ಮುಂದುವರಿದದ್ದು)

ಎಲ್ಲಾ ಮುಖಂಡರೂ ಬಿಡುಗಡೆ ಯಾದರು. ಅವರು ಮುಂದಿ ಯೋಜನೆಯ — ಕಾರ್ಯದ ಬೆಟ್ಟವನ್ನೇ ತಂದಿಟ್ಟರು ಬಾಪೂ. ಎಲ್ಲರೂ ಸಿವಾಲ್ದ ಸ್ವಾಗತವನ್ನು ಹೊಂದಿದರು ಆದರೆ ' ಜಗತ್ತಿನ ಮಹಾತ್ಮನಾಗಿ, ಅಖಿಲ ಆರ್ಯಾವೃತ್ತದ ರಾಜರಾಜನಾಗಿ ' ಅಲ್ಲ ಅದೊಬ್ಬ ನಿಷ್ಪಕ್ಷ ನಿರೀಕ್ಷಕನಾಗಿ, ಅದರೂ ಪೇಪಲ್ಲರನ್ನು ಕಂಡರು. ಭಾರತ ಸ್ವಾತಂತ್ರ್ಯ. ಅವರ ಧ್ಯೇಯಗಳನ್ನು ಚರ್ಚಿಸಿದರು. ' ಸಂಘಟನೆಯೇ ನಮ್ಮ ಗುರಿ. ದೇಶವು ಸಿದ್ಧವಿದೆ ' ಎಂದು ತನ್ನ ಮಂತ್ರಾನುಗ್ರಹಾತ್ರಗಳಿಂದ ಅವುಗಳನ್ನು ಪಾಡಿಸಿದರು. ಆದರೂ ಸಾಧಿಸಲಿಲ್ಲ. ಎಷ್ಟೊಂದು ದಿನದ ಪ್ರಯತ್ನ ? ಅದೆಂತಹ ಶ್ರಮ—ಸೋಲುಗಳ ತಾಂಡವ ? ' ಇಲ್ಲ, ನಾನು ನಿರಾಸೆ ಪಡಲಾರೆ, ನಾವು ಇನ್ನೂ ದುಡಿಯಬೇಕಿದೆ ' ಎಂದು ಹೊರಟರು ಅವರು ಸಿವಾಲ್ದಿಂದ ಅವರು ಅಷ್ಟೊಂದು ಶಾಂತಿಯ ಪ್ರವಾದಿಗಳು. ಭಾರತವು ಅವರಿಗೆ ಎಂದೆಂದಿಗೂ ಚಿರಋಣಿಯಾಗಿರುವುದು!

ಸೇವಾಗ್ರಾಮದ ಧ್ರುವತಾರೆಯನ್ನು ಆರಸುತ್ತಾ ಮುಖಂಡರು ಬಂದರು. ಬಾಪೂ ಇನ್ನೂ ಒಂದರವೇಲೊಂದಾಗಿ ಘಟಸಿದುದನ್ನು ಮರೆದಿಲ್ಲ ! ಆ ಬೇಸರ ವಿಷಾದದ ರೇಖೆ ಇನ್ನೂ ಅವರಿಂದ ತೊಲಗಿಲ್ಲ ಮುಂದಣ ಹೆಜ್ಜೆಯು ಮಂತ್ರದಲ್ಲಿ ಅವರು ತಲ್ಲೀನರಾಗುತ್ತಿರುವರು

ಬಾಪುವಿನ ನಾಲ್ಕನ್ತು ಭಾರತದ ರಾಷ್ಟ್ರಭಾಕ್ತರು ನೆರೆಯುತ್ತಿರುವರು. ಮೊನ್ನೆ ಮೊನ್ನೆಯೇ ಅವರು ಜನಾವಣೆ ರಂಗಕ್ಕಾಗಿ ಭಾರತವನ್ನು ಸಿದ್ಧಗೊಳಿಸುವ ಘೋಷಣೆಯನ್ನು ಹೊರಡಿಸಿರುವರು !

ಬಾಪೂ ಅವರೆಂತಹ ವ್ಯಕ್ತಿಯವರು ಸೂಕ್ಷ್ಮದರ್ಶಿ ಯೋಗಿಯೇ ! ಅವರು ಜಗತ್ತಿನ ರತ್ನವೊಂದು ; ಭಾರತದ ದಿವ್ಯಜ್ಯೋತಿ ! ತನ್ನದೆಲ್ಲವನ್ನೂ ಭಾರತಾಂಬೆಯ ಮುಡಿಯಲ್ಲಿ ಹಾಕಿ ನಿಂದಿರುವ ಮಹಾಪುರುಷರವರು ! ಅವರ ದಿನವು ನಮ್ಮ ಹಬ್ಬದ ದಿನ—ಗೆಲುವಿನ ದಿನ !

(ಮುಂದುವರಿಯುವುದು)

At Ranjit

Humayun

4 ನೇ ವಾರ

ರಣಜಿತ್ ಟಾಕೀಸಿನಲ್ಲಿ

.... ಹುಮಾಯೂರ್....

(ಹಿಂದಿ)

ಅಶೋಕ ಕುಮಾರ್, ಚಂದ್ರಮೋಹನ್ ವೀಣಾ, ನರ್ಗಿಸ್,, ಷಾ ನವಾಜ್ ಪಾತ್ರವಹಿಸಿರುವರು

For Good Printing

L. N. Press

Sriramp st MYSORE

ಅರಕ

ಸಾಮಾಜಿಕ ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore



ಐ. ಜೆ. ಹಾಲ್

ರವೀಂದ್ರ ರಸ್ತೆ — ಮೈಸೂರು

ಯುದ್ಧದಲ್ಲಿ ಜಯಗಳಿಸಿತ್ತಿದ್ದಕ್ಕೆ ಸಂತೋಷ

ಸುಖ ಆರೋಗ್ಯ ಆನಂದದಾಯಕ ಶ್ರೀ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. ೩-೮-೦ ಮಾತ್ರ.

ನಮ್ಮ ಸುಗಂಧ ಅಡಿಕೆವುಡಿ ಬಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾರವಾಗಿರುವುದು. ವಿವರಗಳಿಗೆ ಮತ್ತು ಏಜೆಂಟರಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪, ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.